ಅ) ದೊಡ್ಡ ದೊಡ್ಡ ಕಾಫಿ ಪ್ಲಾಂಟರುಗಳು ಅತಿಕ್ರಮಿಸಿರುವ ರೆವಿನ್ಯೂ, ಅರಣ್ಯ ಮತ್ತು ಗೋಮಾಳಗಳ ಸಾವಿರಾರು ಎಕರೆ ಜಮೀನನ್ನು ತೆರವುಗೊಳಿಸಿರುವುದು ನಿಜವೇ ;

ಆ) ಹಾಗಿದ್ದಲ್ಲಿ, ತೆರವುಗೊಳಿಸಿರುವ ಭೂ ರಹಿತ / ಕೂಲಿ ಕಾರ್ಮಿಕ / ಪರಿಶಿಷ್ಟ ಜಾತಿ/ ಪಂಗಡದ ಕುಟುಂಬಗಳಿಗೆ ಪರಿಹಾರ ನೀಡುವ ಯೋಜನೆ ಏನಾದರೂ ಸರ್ಕಾರದ ಮುಂದಿದೆಯೇ ;

ಇ) ಹಾಗಿಲ್ಲದಿದ್ದಲ್ಲಿ, ಈ ಜನತೆಗೆ ಅನುಕೂಲ ಕಲ್ಪಿಸಲು ಯೋಜನೆಯೊಂದನ್ನು ರೂಪಿಸಲು ಇರುವ ತೊಡರುಗಳೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)–

ಅ) ಒಂದೇ ಒಂದು ಪ್ರಕರಣದಲ್ಲಿ ಈಗ ತೆರವುಗೊಳಿಸಿದೆ. ಉಳಿದವುಗಳ ಬಗ್ಗೆ ಸರ್ವೆ ಕಾರ್ಯ ಮಾಡಲು ಆದೇಶಿಸಿದೆ. ಈ ಸರ್ವೆ ಕಾರ್ಯವನ್ನು ಜುಲೈ 2007ರೊಳಗಾಗಿ ಮುಗಿಸಲು ಯೋಜಿಸಲಾಗಿದೆ.

ಆ) ಪರಿಶೀಲನೆಯಲ್ಲಿದೆ.

ಇ) ಅನುಕೂಲಕರ ಯೋಜನೆಯನ್ನು ರೂಪಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

230 (617) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾರಾಷ್ಟ್ರದಲ್ಲಿ ವಾಹನ ನೋಂದಣಿ ತೆರಿಗೆ, ಪೆಟ್ರೋಲ್ ತೆರಿಗೆ ಆಹಾರ ಧಾನ್ಯಗಳ ಮೇಲಿನ ತೆರಿಗೆ ಕರ್ನಾಟಕ ರಾಜ್ಯದ ದರಗಳಿಗಿಂತ ಕಡಿಮೆ ಇರುವುದರಿಂದ ಬೀದರ್ ಜಿಲ್ಲೆಯ ಬಹುತೇಕ ಗ್ರಾಹಕರು ಗಡಿಭಾಗದಿಂದ ಕೇವಲ ಒಂದು ಕಿ.ಮಿ. ದೂರದಲ್ಲಿರುವ ಮಹಾರಾಷ್ಟ್ರಕ್ಕೆ ಹೋಗುತ್ತಿರುವುದನ್ನು ತಡೆಗಟ್ಟಲು ರಾಜ್ಯ ಸರ್ಕಾರವು ಸಹ ಮಹಾರಾಷ್ಟ್ರದಲ್ಲಿರುವಂತೆ ತೆರಿಗೆಯನ್ನು ಕಡಿತಗೊಳಿಸುವುದೇ ;

ಆ) ಇಲ್ಲದಿದ್ದಲ್ಲಿ, ಕಾರಣಗಳೇನು ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)–

ಅ) ಮಹಾರಾಷ್ಟ್ರ ರಾಜ್ಯದಲ್ಲಿರುವಂತೆ ಕರ್ನಾಟಕ ರಾಜ್ಯದಲ್ಲಿಯೂ ಕೂಡ ಆಹಾರ ಧಾನ್ಯಗಳ ಮೇಲೆ ಯಾವುದೇ ಮಾರಾಟ ತೆರಿಗೆ ಅಥವಾ ಮೌಲ್ಯವರ್ಧಿತ ತೆರಿಗೆ ಇರುವುದಿಲ್ಲ. ಪೆಟ್ರೋಲ್ ಮತ್ತು ಡೀಸೆಲ್‌ಗೆ ಸಂಬಂಧಿಸಿದಂತೆ ಪೆಟ್ರೋಲ್ ಮೇಲಿನ ತೆರಿಗೆ ಹೆಚ್ಚಿಗೆ ಇದ್ದಾಗ್ಯೂ ಡೀಸೆಲ್

ಮೇಲಿನ ತೆರಿಗೆ ದರ ಕಡಿಮೆ ಇರುತ್ತದೆ. ತೆರಿಗೆ ದರಗಳನ್ನು ಕಡಿತ ಮಾಡಿದಲ್ಲಿ ರಾಜ್ಯದ ಬೊಕ್ಕಸಕ್ಕೆ ಗಣನೀಯವಾಗಿ ಆರ್ಥಿಕ ನಷ್ಟ ಉಂಟಾಗುತ್ತದೆ ಮತ್ತು ಇದರಿಂದಾಗಿ ರಾಜ್ಯ ಯೋಜನೆಗಳ ಮೇಲೆ ಪರಿಣಾಮ ಬೀರಿ ಒಟ್ಟಾರೆ ಅಭಿವೃದ್ಧಿಯು ಕುಂಠಿತವಾಗುವುದರಿಂದ ಪೆಟ್ರೋಲ್ ಮೇಲಿನ ತೆರಿಗೆ ದರವನ್ನು ಕಡಿಮೆ ಮಾಡಲು ಸಾಧ್ಯವಾಗುವುದಿಲ್ಲ. ಇದಲ್ಲದೆ ಮಹಾರಾಷ್ಟ್ರ ಸರ್ಕಾರದಲ್ಲಿದ್ದಂತೆ ವಾಹನ ನೋಂದಣಿ ತೆರಿಗೆ ದರವನ್ನು ಕಡಿಮೆಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ ಹಾಗೂ ನೆರೆ ರಾಜ್ಯಗಳಲ್ಲಿ ವಾಹನಗಳನ್ನು ನೋಂದಾವಣಿ ಮಾಡಿಸಿಕೊಂಡು ಕರ್ನಾಟಕ ರಾಜ್ಯದಲ್ಲಿ ಕಾನೂನು ಪ್ರಕಾರ ತೆರಿಗೆಯನ್ನು ಸಂದಾಯ ಮಾಡದೇ ನಿರಂತರವಾಗಿ ಅಂತಹ ವಾಹನಗಳನ್ನು ಕರ್ನಾಟಕ ರಾಜ್ಯದಲ್ಲಿ ನೆಡೆಸಲು ಸಾಧ್ಯವಾಗುವುದಿಲ್ಲ.

ಆ) ಅನ್ವಯಿಸುವುದಿಲ್ಲ.

231 (618) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಬ್ಕಾರಿ ಗುತ್ತಿಗೆದಾರರಿಂದ ರಾಜ್ಯ ಸರ್ಕಾರಕ್ಕೆ ಬಾಕಿ ಬರಬೇಕಾಗಿರುವ ಹಣದ ಮೊತ್ತವೆಷ್ಟು ;

ಆ) ಎಷ್ಟು ದಿನಗಳಿಂದ ಈ ಬಾಕಿ ಉಳಿದುಕೊಂಡಿದೆ (ಗುತ್ತಿಗೆದಾರರ ಹೆಸರು ಹಾಗೂ ಬಾಕಿಯ ವಿವರಗಳನ್ನು ಜಿಲ್ಲಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು) ;

ಇ) ಈ ಬಾಕಿಯನ್ನು ವಸೂಲು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) –

ಅ) ದಿನಾಂಕ 31.03.2006ರ ಅಂತ್ಯಕ್ಕೆ ಅಬಕಾರಿ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿಯ ವಿವರಗಳು ಈ ಕೆಳಕಂಡಂತಿದೆ.

ರೂ.ಕೋಟಿಗಳಲ್ಲಿ

ಅಸಲು	ಬಡ್ಡಿ	ಒಟ್ಟು
288.13	411.91	700.04

ಆ) ಬಾಕಿಯು 1946.47 ಸಾಲಿನಿಂದ ದಿನಾಂಕ: 31.03.2006ರ ಅಂತ್ಯದವರೆಗೆ ಅವಧಿಗೆ ಒಳಪಟ್ಟಿರುತ್ತದೆ. ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.